ಆಮೆ ಮಾತು ಮುಂದುವರೆಸಿ 'ಕಾಲ ಕೆಟ್ಟಿದೆ ಎಂದು ಹೇಳಲಿಕ್ಕಾಗಲ್ಲ. ಕೆಟ್ಟಿದೆ ಎನ್ನುವುದು ಸುಳ್ಳಲ್ಲ' ಎಂದು ಹೇಳುವುದಕ್ಕೂ ಅತ್ತಿಂದ ಮಲ್ಲನ ಗಾಡಿ ಬರುವುದಕ್ಕೂ ಒಂದೇ ಆಗಿತ್ತು. ನರಿಯ ಮೈಮೇಲೆ ತಣ್ಣೀರು ಚೆಲ್ಲಿದಂತಾಗಿ ಹಿಮ್ಮೇಳದಲ್ಲಿ ಬಂದ ಮದ್ದಳೆಯ ಸದ್ದಿನ ಹಾಗೆ ಸಿದ್ದನ ನೆನಪು ಒಳಗೆ ಭುಗಿಲೆದ್ದು ಆಮೆಯ ಕೇಳಿತು. ನರಿಯ ಆಕ್ರೋಶ ಅಶಾಂತಿ ಕಂಡ ಆಮೆಯು 'ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳಬಾರದು. ನಾವು ಯಾರದೋ ಬಾಯಿಂದ ಬರುವ ಶಬ್ದದಿಂದ ಹಾದಿ ತಪ್ಪಲೂ ಬಾರದು. ಒಳ್ಳೆಯ ಮನುಷ್ಯನ ಹೃದಯದಲ್ಲಿ ಪ್ರೇಮದ ಹೂ ಅರಳುತ್ತದೆ ಹಾಗೂ ಕರುಣೆ ಹರಡುತ್ತದೆ. ನಿಜವಾಗಿಯೂ ಮನುಷ್ಯ ಕ್ರೂರಿಯಾಗಿರುವುದಿಲ್ಲ. ಅರಿವಿನಿಂದ ಬಾಳುತ್ತಾನೆ, ಬದುಕುತ್ತಾನೆ, ಇನ್ನೊಬ್ಬರಿಗೆ ದಾರಿಯಾಗಿರುತ್ತಾನೆ' ಎಂದ ಆಮೆಯ ಮಾತು ಕೇಳಿ ಬೆಳ್ಳಕ್ಕಿಯ ಹೃದಯ ಅರಳಿ ಆ ಚಳಿಯಲ್ಲೂ ಮುಂದೆ ಬಂದು ಮಾತಿಗೆ ಕಿವಿಯಾಯಿತು.

ಆಮೆಯ ಮಾತಿನಿಂದ ನರಿಗೆ ಸಿಟ್ಟುಬಂದು 'ನಿನ್ನ ಮಾತು ಕರುಣೆಯದ್ದಾಗಿರುತ್ತದೆ. ಆದರೆ ಆವತ್ತು ಅವಕ್ಕೇನಾರ ಕರುಣೆ ಮನಸ್ಸು ಬಂದು ಎಲ್ಲಾದರೂ ದೂರದ ದ್ವೀಪಕ್ಕೆ ಬಿಟ್ಟು ಬಂದಿದ್ದರೂ ಇನ್ನೂ ನಾಕಾರು ವರ್ಷ ಸಿದ್ದನ ಜೀವ ಈ ಭೂಮಿ ಮೇಲೆ ಉಳಿದಿರುತ್ತಿರಲಿಲ್ಲವಾ?' ಎಂದು ಹೇಳುತ್ತಾ ನರಿ ಸಂಕಟಪಟ್ಟಿತು. ನರಿಯ ಸಂಕಟ ದುಃಖ ಕಣ್ಣಾರೆ ಕಂಡ ಆಮೆಯು 'ನೀನು ನಿನ್ನೊಳಗೆ ಅಳುವುದ ಬಿಡು. ಸಿಟ್ಟಿನಿಂದ ಜಿದ್ದಿನಿಂದ ದೇಹಕ್ಕೆ ಹಾನಿ ಆಗಿರಬಹುದು. ಈ ಪ್ರೀತಿಯ ಆತ್ಮಕ್ಕಲ್ಲ. ಇಲ್ಲಿಲ್ಲದಿದ್ದರೂ ಕಾಲದಲ್ಲಿ ಉಳಿದಿರುತ್ತದೆ' ಎಂದು ಸಮಾಧಾನ ಹೇಳಿತು. ದೂರದಲ್ಲಿ ಬರುತ್ತಿದ್ದ ಎತ್ತಿನ ಗಾಡಿಯ ಸದ್ದು ಹತ್ತಿರವೇ ಬಂದಂತೆ ಕಟ್ಟೆಯ ಸರಹದ್ದಿನ ಹಸಿರು ಬೇಲಿಗೆ ಕುಂಡಿ ಬದಲಿಸಿದ ಊರ ಹೆಂಗಸರು, ಅರ್ಥವಾಗದ ಅವರ ಪಿಸುಪಿಸು ಮಾತು ದಕ್ಕಿಸಿಕೊಳ್ಳಲು ಬೇಲಿ ಕಿವಿ ಹೂ ಆಲೆಗಳ ಅರಳಿಸುತ್ತಾ, ಇತ್ತಲೇ ಬರುಬರುತ್ತಾ ಸದ್ದು ಎದ್ದು ಗುದ್ದಿದ ಕೂಡಲೇ,

ಆಮೆ ನೀರಿಗೆ ಜಾರಿತು.
ನರಿಯು ಬೇಲಿಗೆ ಓಡಿತು
ಕೊಕ್ಕರೆ ಬಾನಿಗೆ ಹಾರಿತು.

* * *

ಹಟ್ಟಿಯ ಜನ ಆಕಳಿಸುತ್ತಾ ಎದ್ದು ಕಣ್ಣು ಬಿಡುತ್ತಾ ಟೀ ಸೊಪ್ಪು, ಬೆಲ್ಲ ಮತ್ತು ಹಾಲಿಗೆಂದು ಅತ್ತ ಹೋಗುತ್ತಲೂ ಇತ್ತ ಬರುತ್ತಲೂ ಇದ್ದರು. ಈ ಬೀದಿ ನಾಯಿಗಳು ಮನೆ ಮುಂದೆ ಸುರಿದ ಬೂದಿಯಲ್ಲಿ ಬಿಲ್ಲೆ ಸುತ್ತಿಕೊಂಡು ಮಲಗಿದ್ದರಿಂದ ಊರು ಇನ್ನೂ ಚುರುಕಾಗಿ ಇಲ್ಲದಿರುವುದು ಎದ್ದು ಕಾಣುತ್ತಿತ್ತು. ಬಿಸಿಲು ಬಂದರೆ ಹೊಲದಲ್ಲಿ ಕಾಳು ಸಿಡಿಯುತ್ತವೆ. ಬೇಗ ಬನ್ನಿ ಎಂದು ಅದ್ಯಾರೋ ಹುಳ್ಳಿ ಕೀಳಲು ಅಕ್ಕಡಿಯವರ ಜೊತೆ ಮಾತನಾಡುತ್ತಿರುವ ಧ್ವನಿ ಅಲ್ಲಲ್ಲೇ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಅದೆಲ್ಲಿಂದಲೋ ನುಗ್ಗಿ ಓಡಿಬಂದ ತ್ಯಾಗನು ಅವನ ಗಾಡಿಗೆ ಬ್ರೇಕ್ ಹಾಕಿದ್ದು ಅಂಗಡಿಯ ಹತ್ತಿರವೆ.

ತ್ಯಾಗ 'ಅಣ ನನಗೊಂದು ಪೆಪ್ಪರ್ಮೆಂಟ್ ಕೊಡು' ಅಂದು ಜೇಬಿನಿಂದ ಒಂದು ನೋಟು ತೆಗೆದಿಟ್ಟ. ಆ ನೋಟನ್ನ ನಾಲ್ಕಾರು ಬಾರಿ ತಿರುಗಿಸಿ ಮಡಚಿ ನೋಡುತ್ತಾ ಆ ಶಿವಣ್ಣ ಎರಡನೇ ಬಾರಿಗೆ ಗಲ್ಲಾ ಪೆಟ್ಟಿಗೆಗೆ ಕೈ ಹಾಕಿ: 'ಯಾವುದ್ಲಾ ಅದು?' ಎಂದು ನೇತು ಬಿದ್ದಿದ್ದ ಆ ಕವರಿನ ಸರಮಾಲೆಗೆ ಕೈ ಹಾಕುತ್ತಿರುವಾಗ ಇತ್ತ ತ್ಯಾಗ.

'ಅಣ ನನಗೊಂದು ಚಂದ್ರನಂಗೆ ದುಂಡಗಿರದ ಕೊಡು' ಎಂದ ಆ ಮೊಗದಲ್ಲಿ ಒಂದಷ್ಟು ಪ್ರೀತಿ ಜಾರಿತು. ಈ ಶಿವಣ್ಣ ಕೈಗೆ ಸಿಕ್ಕಿದ್ದನ್ನೇ ಎತ್ತಿ ಇವನಿಗೆ ಕೊಡುತ್ತಾ 'ತಗಳ್ಳ, ಇಷ್ಟೊತ್ನಲ್ಲಿ ಯಾವ ಚಂದ್ರ, ತಕಂಡೋಗು ಈ ಸೂರ್ಯನ್ನೆ' ಅಂತ ಮತ್ತೆ ಕವರಿಗೆ ಕೈ ಹಾಕಲಾರದ ಸಂಕಟಕ್ಕೆ ಕೈಗೆ ಸಿಕ್ಕಿದ್ದನ್ನೇ ಕೊಡೋಕೆ ಯತ್ನಿಸಿದ, ಅದಕ್ಕೆ ಒಪ್ಪದ ತ್ಯಾಗ: 'ನನಗೆ ಚಂದ್ರನ್ನೇ ಕೊಡೋದಾದ್ರೆ ಕೊಡು, ಇಲ್ಲಾ ಅಂದ್ರೆ ನನ್ನ ದುಡ್ನ ನನಗೆ ವಾಪಸ್ ಕೊಡು' ಎಂದು ಹಟ ಹಿಡಿದ.

ತ್ಯಾಗನ ದನಿ ಮತ್ತಷ್ಟು ಮಗದಷ್ಟು ಇಂಪಾಗಿ, ಗೊಣಗುತ್ತ ಈ ಶಿವಣ್ಣ ಮತ್ತೆ ಆ ಕವರುಗಳಿಗೆ ಕೈ ಹಾಕುತ್ತಾ, ಒಂದೊಂದೇ ಕವರಿನಲ್ಲಿ ಚಂದ್ರನನ್ನೇ ತಡಕಿ ಹುಡುಕಿ ತೆಗಿಬೇಕಾದರೆ ಇತ್ತ ತ್ಯಾಗ ಸುತ್ತಮುತ್ತ ಕಣ್ಣಾಡಿಸಿ, ಅವನ ಎದುರಿಗಿದ್ದ ಡಬ್ಬಿಗಳ ಮುಚ್ಚಳಗಳನ್ನು ಮೆಲ್ಲಗೆ ತೆರೆದ. ಅದು ಬ್ರಹ್ಮಾಂಡದಂತೆ ಕಂಡು ಅಲ್ಲಿದ್ದ ಪೆಪ್ಪರ್ಮೆಂಟ್, ಮಿಠಾಯಿ ಕೈಗೆ ಸಿಕ್ಕಿದಷ್ಟೂ ಆನಂದವಾಗಿ ಜೇನು ಹೀರಿ ಮೈ ತುಂಬಿಕೊಂಡು ಬೀಗುವ ದುಂಬಿಯಂತೆ ಮನಸ್ಸು ಅತ್ತಿತ್ತ ಹಾರಾಡುತ್ತಿತ್ತು.

ಇತ್ತ ಶಿವಣ್ಣ 'ತಗಾ ನಿನ್ನ ಚಂದ್ರ' ಅಂತ ತ್ಯಾಗನ ಕೈಗೆ ಪೆಪ್ಪರ್ಮೆಂಟ್ ಇಟ್ಟಿದ್ದೇ ತಡ ಅಲ್ಲಿಂದಲೇ ತನ್ನಟ್ಟಿಯತ್ತ ಓಡಿದ. ಅಂಗಿ ಜೇಬಿಗೆ ಒಂದು ಕೈ, ಚಡ್ಡಿ ಜೇಬಿಗೆ ಇನ್ನೊಂದು ಕೈ ಭದ್ರವಾಗಿ ಹಿಡಿದುಕೊಂಡು ಮುಸ ಮುಸ ಅಂತ ಉಸಿರು ಮೇಲೆ ಕೆಳಗೆ ಮಾಡುತ್ತಾ ಬಂದು ನಿಂತ ತ್ಯಾಗನನ್ನು ಕಂಡು 'ಅಯ್ಯೋ ನಿನ್ನ ಜನ್ಮಕ್ಕೆ ಬೆಂಕಿ ಹಾಕ, ನಿನಗೇನ್ ಬಂತು ಆಪತ್ತು ಇಂಗೆ ಮ್ಯಾಕೂ ಕೆಳಿಕೂ ಉಸಿರ ಬಿಡ್ತಾ ಇದಿಯ' ಎಂದ ದ್ಯಾವಕ್ಕನಿಗೆ ಆಗ ಒಮ್ಮೆಲೇ ಅರಿವು ಉಂಟಾಯಿತು. 'ಇಷ್ಟೊತ್ತು ಎಲ್ಲೋಗಿದ್ಲಾ' ಎನ್ನುತ್ತಾ ಅವನ ಸುತ್ತಮುತ್ತ ಕಣ್ಣಾಡಿಸಿ 'ಅಯ್ಯೋ ಇದೇನ್ಲ ಜೇಬಲ್ಲಿ ಅಷ್ಟೊಂದು. ಕೈ ತೆಗಿ ನೋಡನ' ಅಂದು ಇವನ ಜೇಬಿಗೆ ಕೈ ಹಾಕಲು ಹೋದಳು. ಉಸಿರು ಬಿಡ್ತಾನೆ ಕೈ ಕೊಸರಿಕೊಂಡು ಜಗಲಿಯ ಮತ್ತೊಂದು ಮೂಲೆಗೆ ಆತು ಕುಂತ. ಅವನವತಾರ ಕಂಡ ದ್ಯಾವಕ್ಕ 'ಹೋಗ್ಲ ನಿನ್ನ ಜನ್ಮಕ್ಕಿಷ್ಟು' ಎಂದು ಅರಳುತ್ತಿರುವ ಮಗನ ಹಸಿವು ದಾಹವನ್ನರಿತು ಒಳಹೋದಳು. ಇತ್ತ ತ್ಯಾಗನು ಜೇಬಿನಲ್ಲಿದ್ದ ತಿಂಡಿಗಳನ್ನೆಲ್ಲ ಜಗಲಿಯ ಒಂದು ಕಲ್ಲಿನ ಮೇಲೆ ಸುರಿದು ಖುಷಿಪಟ್ಟ. ಆ ಗುಂಪಿನಿಂದ ಒಂದು ಪೆಪ್ಪರ್ಮೆಂಟ್ ಎತ್ತಿ ಬಾಯಿಗೆ ಎಸೆದುಕೊಂಡು ಚೀಪುತ್ತಾ ಚೀಪುತ್ತಾ ಒಂದೊಂದು ಒಂದೊಂದು ಕಡೆಗೆ ದೂಡುತ್ತಾ ಲೆಕ್ಕ ಹಾಕುತ್ತಿದ್ದ. ಬೀದಿ ಮನೆ ಆಗಿದ್ರಿಂದ ಆಕಡೆ ಈ ಕಡೆಗೆ ಹೋಗುವವರು ಬರುವವರು ಕಾಣುತ್ತಿದ್ದರು. ಅವರ ಮಾತೂ ಕೇಳುತ್ತಿತ್ತು. ಊರ ದಾರಿಯಲ್ಲಿ ಅವಳ್ಯಾರೋ ಪಿತ್ತ ನೆತ್ತಿಗೆ ಅಡರಿ ಮಾತಲ್ಲೇ ಕೊಲ್ಲುತ್ತಿದ್ದಳು. 'ನೀನು ಬರದಾದ್ರೆ ಬಾ, ಇಲ್ಲ ಅಂದ್ರೆ ಬಿಡು; ನಂಗೆ ಅವಳಂಗಂದ್ಲು, ಇವಳು ಅಂಗಂದ್ಲು ಅದ್ಯಾವ್ದೂ ಬೇಡ್ಯಾ ಯಾವುದ್ನೂ ಬೇಗ ಹೇಳು' ಅನ್ನುತ್ತಾ ಅತ್ತ ಹೋಗುತ್ತಿದ್ದಳು. ಅವರ ಹಿಂದೆ ಕುಂಬಾರರ ಗಾಡಿ ಹೋಗುತ್ತಿತ್ತು. ಈ ಗಾಡಿ ಶಬ್ದಕ್ಕೆ ಅವರ ದನಿ ತ್ಯಾಗನಿಗೆ ಹೆಚ್ಚೇನೂ ಕೇಳಿಸಲಿಲ್ಲವಾದರೂ, ಆ ಕೋಟೆ ಬೀದಿ ಕಡೆಯಿಂದ ಎರಡು ಕಣ್ಣೂ ಕಾಣದ ಕೆಂಚಜ್ಜನನ್ನು ಅವನ ಆರು ವರ್ಷದ ಮಗ ಕೈ ಹಿಡಿದುಕೊಂಡು ನೀರು ಮುಟ್ಟಿಸೋಕೆ ಕಟ್ಟೆ ಕಡೆಗೆ ಕರೆದುಕೊಂಡು ಹೋಗುತ್ತಿರುವುದು ಕಣ್ಣಿಗೆ ಕಾಣಿಸುತ್ತಿತ್ತು. ಆದರೂ ಎಲ್ಲಿಗೆ ಹೋಗುತ್ತಿದ್ದಾರೆಂದು ಅರಿವಿಗೆ ಬಾರದೆ: 'ಲೋ ಚಿಕ್ಕ ಎಲ್ಲೋಗ್ತಿದ್ದಿಯಾ' ಎಂದು ಕೇಳಿ 'ಮಣ್ಣಿನ ಹೂವಿನ ಆಟ ಆಡನ ಬತ್ತಿಯಾ'ಎಂದು ಕೂಗಿದ. ಚಿಕ್ಕನಿಗೆ ಆಟ ತಪ್ಪಿದ್ದಕ್ಕೆ ಸಿಟ್ಟು ಬಂದು 'ಇಲ್ಲ ಕಣೊ ಇವನವ್ವನ್ ನಮ್ಮಪ್ಪನ್ನ ಎಲ್ಡಕ್ಕೆ ಕರ್ಕಂಡೋಗ್ತಿದ್ದೀನಿ' ಅಂದೋನು ಬಲಗೈಲಿ ಅವನಪ್ಪನ ದೊಣ್ಣೆ ಊರಿಸ್ಕಂಡು ಎಡಗೈನಲ್ಲಿ ಹಿಡ್ಕೊಂಡು ಅತ್ತ ಕಟ್ಟೆಯತ್ತ ಯಳ್ಕಂಡು ಹೋಗ್ತಿದ್ದ. ಕೆಂಚಜ್ಜ ತಪಾ ತಪಾ ಅಂತ ಹೆಜ್ಜೆ ಹಾಕುತ್ತಾ ಅವನು ಎಳೆದತ್ತ ಹೋಗುತ್ತಿದ್ದ. ಈ ಚಿಕ್ಕನು ದಾರಿಯಲ್ಲಿ ಸಿಕ್ಕ ಸಣ್ಣ ಸಣ್ಣ ಕಲ್ಲು ಎತ್ತಿ ನಾಯಿಯತ್ತ ಎಸೆಯುತ್ತಾ, ಕಾಲಿನಲ್ಲಿ ದೂಳು ಒದೆಯುತ್ತಾ ಆಗಾಗ ಕೆಂಚಜ್ಜನ ಕೈ ಹಿಡಿದು ಬಿಟ್ಟು ಮಾಡುತ್ತ, ಲಗೋರಿ ಆಡುತ್ತಾ ನಡೆಯುತ್ತಿದ್ದ. ಕೆಂಚಜ್ಜನಿಗೆ ತನ್ನೊಳಗಿನ ಸಂಕಟದಿಂದ ತೂಬೆತ್ತಿದಂತಾಗಿ ತುಸು ತಡೆಯಲಾರದೆ ತನ್ನೆರಡೂ ಕುಂಡಿಗಳ ಚಳುಕಿಸುತ್ತಾ 'ಲೇ ಬೇಗ ಕರ್ಕಂಡೋಗಿ ಕೂರುಸ್ಲಾ' ಅನ್ನುತ್ತಿದ್ದ. ಅವರು ಹೋಗುವ ದಾರಿಯತ್ತಲೇ ನೋಡುತ್ತಿದ್ದ ತ್ಯಾಗನಿಗೆ ಕಣ್ಣು ಕಾಣಿಸದೇ ಇದ್ದರೂ ಪರವಾಗಿರಲಿಲ್ಲ ನನಗೂ ಅಪ್ಪ ಇರಬೇಕಿತ್ತು ಅನ್ನಿಸದೇ ಇರಲಿಲ್ಲ. ಊರ ಮಂದಿಗೆ ಅಂಜಿದಂತೆ ತಲೆ ಕೆಳಗೆ ಮಾಡಿದ. ಇತ್ತ ಚಿಕ್ಕನು ಅವನಪ್ಪನ ಜೊತೆ ಮಾತಾಡುತ್ತಾ ಮಾತಾಡುತ್ತಾ: 'ಅಪ್ಪೋ ನೀನು ಆಳ್ತಕ್ಕೆ ಕೂಳು ತಿನ್ನಬಾರ್ದ, ದಿನಕ್ಕೆ ಎಷ್ಟು ಸಾರಿ ಹೇಳ್ತೀಯ?' ಅಂದ. ಇತ್ತ ಅಕ್ಕಡಿಗೆ ಹೋಗುವವರು ಚಿಕ್ಕನ ಆ ಮಾತಿಗೆ ಕಿಸಕ್ಕನೆ ನಕ್ಕು 'ಇಷ್ಟು ಚಿಕ್ದು, ಅವರಪ್ಪನ್ನೇ ಯಂಗೆ ಬಯ್ಯತ್ತೆ ನೋಡು' ಅಂತ ಹೇಳುತ್ತಿರುವಾಗಲೇ ಅವರಲ್ಲೇ ಒಬ್ಬ ಮುಂದಾಳು ಅಯ್ಯೋ 'ಬಾಳಾ ಟೈಂ ಆದ್ರೆ ವಲ್ದಲ್ಲಿ ಕಾಳು ಸಿಡಿತವೆ' ಎಂದವನು 'ಆ ಹುಡುಗನ ಮಾತು ಕೇಳ್ಕಂಡು ನಿಂತ್ರೆ ಸಂಜೆ ತನಕ ಇಲ್ಲೇ ಇರಬೇಕಾಗುತ್ತೆ' ಎನ್ನುತ್ತಲೇ ಮುಂದೆ ಮುಂದೆ ಸಾಗುತ್ತಿದ್ದ. ಆದ್ರೆ ಈ ಕೆಂಚಜ್ಜ ಮಾತ್ರ 'ನನ್ನ ಮಗ ಕೈಗೆ ಬಂದ, ನಮ್ಮವ್ವಿಗೆ ನಾನಿಲ್ಲ ಅಂದ್ರು ಇನ್ನು ಮುಂದೆ ಕಷ್ಟ ಇಲ್ಲ' ಅಂತ ಒಳಗೊಳಗೇ ಸಂತಸಪಡುತ್ತಾ ಚಾರ್ಲಿ ಚಾಪ್ಲಿನ್ 'ಮಾಡ್ರನ್ ಟೈಮ್ಸ್' ಸಿನೆಮಾದಲ್ಲಿ ನಡೆದು ಹೋದಂತೆ ಹೋದ.

(ಸಶೇಷ)